# ಗಣೇಶನ ಹಬ್ಬಕ್ಕೆ ಗೌರಿ ಹೂವು

ಬೆಂಕಿಯ ಕೆನ್ನಾಲಿಗೆಯಂತೆ ಕಾಣುವ ಗೌರಿ ಹೂವು, ಆತ್ಯಾಕರ್ಷಕ ಹಳದಿ–ಕೇಸರಿ–ಕೆಂಪು ಬಣ್ಣಗಳ ಸಮೀಕರಣ ಹೊಂದಿದೆ.

■ ರಾಜಶೇಖರ ಡೊಂಬರಮತ್ತೂರ

ಭಾದ್ರಪದ ಮಾಸ ಬಂದಿತೆಂದರೆ ಅಪರೂಪವೆನ್ನುವಂತೆ ಕಂಡುಬರುವ ವಿಶೇಷ ಹೂವು 'ಗೌರಿ ಹೂವು'. ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ಅರಳುವ ಒಂದು ಅಪರೂಪದ ಹೂವು. 'ಗೌರಿಗಣೇಶನ ಪೂಜೆ'ಗೆ ಸಮರ್ಪಿಸಲು ಈ ಹೂವು ಶ್ರೇಷ್ಠವೆಂಬ ನಂಬಿಕೆಯಿದೆ. ಶ್ರಾವಣ ಹಾಗೂ ಭಾದ್ರಪದ ಮಾಸದ ಸಂದರ್ಭದಲ್ಲಿ ಪ್ರಕೃತಿ ಅರಳಿಸುವ ಆಕರ್ಷಣೀಯ ಹೂವುಗಳಲ್ಲಿ ಗೌರಿ ಹೂವು ಕೂಡ ಒಂದು. ದಕ್ಷಿಣ ಭಾರತದ ಕುರುಚಲು ಕಾಡು, ಪೊದೆಗಳು, ಕಾಫಿ ತೋಟಗಳ ನೆಲದಲ್ಲಿ ಹುದುಗಿರುವ ಗೆಡ್ಡೆಗಳಲ್ಲಿ ಚಿಗಿತು ಈ ಗಿಡ ಬೆಳೆಯುವುದು. ದಕ್ಷಿಣ ಭಾರತದ ಕಾಡುಗಳಲ್ಲಿ, ವಿಶೇಷವಾಗಿ ತಮಿಳುನಾಡಿನಲ್ಲಿ ಕಂಡುಬರುವ ಈ ಹೂವು ಉತ್ತರ ಕರ್ನಾಟಕದ ಕೆಲವೆಡೆ ಕಾಣಸಿಗುತ್ತದೆ.



## ಸಸ್ಯ ವಿಶೇಷ

ಕೋಲಿನಂತಹ ಕಾಂಡಕ್ಕೆ ತೊಟ್ಟಿಲ್ಲದೆ ಜೋಡಣೆಯಾಗಿರುವ, ಸುಮಾರು 2ರಿಂದ 3 ಇಂಚು ಉದ್ದವಿರುವ ಎಲೆಗಳು ಭರ್ಜಿಯ ಆಕಾರದಲ್ಲಿರುತ್ತವೆ. ಎಲೆಗಳ ತುದಿಯಲ್ಲಿ ನಾರಿನಂತಹ ಎಳೆಯು ಅಕ್ಕಪಕ್ಕದ ಗಿಡಗಳನ್ನು ಅಡರಿಕೊಂಡು ಬೆಳೆಯಲು ಸಹಕರಿಸುವುದು. ಮೊದಲು ತಿಳಿಹಸಿರು ಬಣ್ಣದಿಂದ ಕೂಡಿರುವ ಮೊಗ್ಗುಗಳು ಕ್ರಮೇಣ ಬದಲಾಗುತ್ತದೆ. ಆರು ದಳಗಳಿರುವ ಹೂವಿನ ಬುಡವು ಹಳದಿ ಬಣ್ಣಕ್ಕೆ ತಿರುಗಿ ತುದಿಯು ಕೆಂಪು ಬಣ್ಣದಿಂದ ಕಂಗೊಳಿಸುತ್ತದೆ. 15ರಿಂದ 20 ದಿನಗಳವರೆಗೆ ದಿನಕ್ಕೊಂದರಂತೆ ಹೂ ಬಿಡುತ್ತದೆ. ಮೂರು ನಾಲ್ಕು ದಿನಗಳ ಅವಧಿಯಲ್ಲಿ ಸಂಪೂರ್ಣವಾಗಿ ಅರಳುವ ಹೂವು ಆರೆಂಟು ದಿನಗಳ ಕಾಲ ಬಾಡದೆ ಇರುವುದು.

ಉರಿಯುವ ಬೆಂಕಿಯ ಕೆನ್ನಾಲಿಗೆಯಂತೆ ಕಾಣುವ ಅತ್ಯಾಕರ್ಷಕ ಹಳದಿ–ಕೇಸರಿ–ಕೆಂಪು ಬಣ್ಣಗಳ ಸಂಕರವು ಮನಸ್ಸಿಗೆ ಮುದ ನೀಡುತ್ತವೆ. ಹೀಗಾಗಿ ಇದನ್ನು 'ಅಗ್ನಿ ಶಿಖೆ', 'ಕೆಂಡದಹೂವು' ಎಂದೂ ಕರೆಯುವರು. ಆರು ಎಸಳುಗಳು ಇದ್ದು, ಅವು ತಿರುಚಿರುತ್ತವೆ. ಅಂತಿಮವಾಗಿ ಹೂ ರಕ್ತವರ್ಣಕ್ಕೆ ತಿರುಗಿ ಅವುಗಳೂ ತಿರುಚಿಕೊಂಡು ಉದುರುತ್ತದೆ.

ಈ ಸಸ್ಯದ ಪ್ರತಿಯೊಂದು ಭಾಗವೂ ವಿಷಕಾರಿ. ಮಾನವ ಮತ್ತು ಪ್ರಾಣಿಗಳು ಸೇವಿಸಿದರೆ ಜೀವಕ್ಕೆ ಅಪಾಯಕಾರಿ ಎನ್ನಲಾಗುತ್ತದೆ. ಈ ಹೂವಿನ ವಿಶೇಷ ಆಕರ್ಷಣೆ ಎಂದರೆ ತಳಭಾಗದಲ್ಲಿರುವ ಹೂವಿನ ಕೇಸರಗಳು. ನೈಸರ್ಗಿಕವಾಗಿ ಬೇರಿನ ಮೂಲಕ ಬೆಳವಣಿಗೆ ಹೊಂದಿ ಬಳ್ಳಿಯಂತೆ ಹಬ್ಬುವ ಈ ಸಸ್ಯದ ಮೂಲಸ್ಥಾನ ಆಫ್ರಿಕಾ ಮತ್ತು ಏಷ್ಯಾ ಎಂದು ಹೇಳಲಾಗುತ್ತಿದೆ. ಸಸ್ಯಶಾಸ್ತ್ರೀಯವಾಗಿ 'ಗ್ಲೋರಿಯೊಸಾ ಸುಪರ್ಬಾ' (Gloriosasuperba) ಎಂದು ಕರೆಯಲ್ಪಡುವ 'ಲಿಲ್ಲಿಯೇಸಿ' ಕುಟುಂಬಕ್ಕೆ ಸೇರಿರುವ ಇದು ಆರ್ಕಿಡ್ ವಂಶಕ್ಕೆ ಸೇರಿದೆ.

ಈ ಹೂವಿಗೆ ಇಂದ್ರನ ಬಳ್ಳಿ, ಕೆಂಡದ ಹೂವು, ಹುಲಿಪಂಜ (Tiger clow), ಅಕ್ಕತಂಗಿ ಬಳ್ಳಿ, ಕೋಳಿ ಕುಟುಮನ ಗೆಡ್ಡೆ, ಲಾಂಗುಲಿಕ, ನೆಲಗುಲಿಕ ಎಂದು ಪ್ರಾದೇಶಿಕವಾಗಿ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಆಂಗ್ಲ Climbing lily, Creeping lily, fire lily, Flame lily, Malabar glory lily, Superb lily, Tiger claw ಎಂಬೆಲ್ಲ ನಾಮಗಳಿಂದಲ ಬೆಂಗಾಲಿಯಲ್ಲಿ 'ಉಲಾಟಾ ಚಂದಾಲಾ'; ಗುಜರಾತಿಯಲ್ಲಿ 'ದುಧಿಯೊ ವಚ್‌ನಾಗ್'; ಹಿಂದಿಯಲ್ಲಿ 'ಬಚ್‌ನಾಗ್', 'ಕಲಿಹಾರಿ', 'ಲಂಗಲಿ'; ಕೊಂಕಣಿಯಲ್ಲಿ 'ಆರ್ತಿ', 'ವಾಗ್', ಮಲಯಾಳಂನಲ್ಲಿ 'ಕಿತೋನ್ನಿ'; ಮರಾಠಿಯಲ್ಲಿ 'ಬಚ್‌ನಾಗ್', 'ಕಳ್‌ಲಾವಿ', 'ಕಡ್ಯಾನಾಗ್'; ನೇಪಾಳಿಯಲ್ಲಿ 'ನೇಪಾಲಿ ಕೇವಾರಾ'; ಒರಿಯಾದಲ್ಲಿ 'ಅಗ್ನಿಶಿಖಾ'; ಪಂಜಾಬಿಯಲ್ಲಿ 'ಮುಲಿಮ್'; ತಮಿಳಿನಲ್ಲಿ 'ಕಂದಾಲ್'; ತೆಲುಗಿನಲ್ಲಿ 'ಅಡವಿನಾಭಿ', 'ಅಗ್ನಿಶಿಖ', 'ಲಾಂಗಲಮು'; ತುಳುವಿನಲ್ಲಿ 'ಬಲಿಪಬೂರು' ಎಂದು ಗುರುತಿಸಲಾಗುತ್ತದೆ. ಇದು ಜಿಂಬಾಬ್ವೆಯ ರಾಷ್ಟ್ರೀಯ ಪುಷ್ಪವೂ ಹೌದು. ನಮ್ಮ ಪಕ್ಕದ ರಾಜ್ಯವಾದ ತಮಿಳುನಾಡಿನ ರಾಜ್ಯ ಪುಷ್ಪವಾಗಿಯೂ ಮನ್ನಣೆ ಪಡೆದಿದೆ.

## ಔಷಧ ಗುಣ

ಹಾವು ಮತ್ತು ಚೇಳಿನ ಕಡಿತ ಗುಣಪಡಿಸುವ ನಂಜು ನಿವಾರಕವಾಗಿ ಇದನ್ನು ಬಳಸಲಾಗುತ್ತದೆ. ಇದರ ಸಾರವು ಪರೋಪಜೀವಿ ವಿರೋಧಿದ್ರವವಾಗಿ ಕಾರ್ಯನಿರ್ವಹಿಸುತ್ತದೆ. ಈ ಸಸ್ಯದ ಹೂವು, ಎಲೆ, ಕಾಂಡ, ಸಿಪ್ಪೆ ಮತ್ತು ಗೆಡ್ಡೆಗಳನ್ನು ಆಯುರ್ವೇದ ಚಿಕಿತ್ಸೆಯಲ್ಲಿ ವಿವಿಧ ಕಾಯಿಲೆ ಗುಣಪಡಿಸುವ ಪದಾರ್ಥಗಳಾಗಿ ಬಳಸಲಾಗುತ್ತದೆ. ಹುಣ್ಣು, ಚರ್ಮರೋಗಕ್ಕೆ ಲೇಪನವಾಗಿ ಬಳಸಲಾಗುತ್ತದೆ.

ಪ್ರತಿಕ್ರಿಯಿಸಿ: feedback@sudha.co.in


